ಇ) ಈ ವಿಭಾಗವು 413 ಅನುಸೂಚಿಗಳಿಗೆ 450 ವಾಹನ ಬಲ ಹೊಂದಿದ್ದು ಶೇ. 9.0 ರಷ್ಟು ಹೆಚ್ಚುವರಿ ವಾಹನ ಬಲ ಹೊಂದಿದೆ. ಈ ವಿಭಾಗದಲ್ಲಿ ಕಾರ್ಯಾಚರಣೆಗಾಗಿ ವಾಹನಗಳ ಕೊರತೆ ಇರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉ.ಕ. (ಸಿಸಿಐ) ವಿಭಾಗಕ್ಕೆ ಈ ಕೆಳಕಂಡಂತೆ ಹೊಸ ವಾಹನಗಳನ್ನು ನೀಡಲಾಗಿದೆ.

ಮಾದರಿ	ಸಿಸಿಐ	ಹಳಿ ಯಾಲ	ಕುಮಟಾ	ಕಾರವಾರ	ಭಟ್ಕಳ	ಒಟ್ಟು
ಡಿಸೆಂಬರ್-1995ರ ವರೆಗೆ.	13	10	10	11	05	49

ಶರಸಿಯಲ್ಲಿರುವ ತೋಟಗಾರಿಕೆ ಇಲಾಖೆ ಸಂಸ್ಕರಣ ಮಂಡಳಿಯಲ್ಲಿ ಅವ್ಯವಹಾರ

197 - ಶ್ರೀ ವಿಶ್ವೇಶ್ವರ ಹೆಗ್ಗಡೆ (ಅಂಕೋಲ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶರಸಿಯಲ್ಲಿರುವ ತೋಟಗಾರಿಕೆ ಇಲಾಖೆಯ ಜಿಲ್ಲಾ ಹಣ್ಣು ಸಂಸ್ಕರಣ ಮಂಡಳಿಯಲ್ಲಿ ಈ ಹಿಂದೆ ನಡೆದ ಅವ್ಯವಹಾರವು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಏನು ಕ್ರಮ ಕೈಗೊಳ್ಳಲಾಯಿತು.

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಬಂದಿದೆ.

ಈ ಸಂಘದಲ್ಲಿ ನಡೆದಿದೆ ಎಂಬ ಅವ್ಯವಹಾರದ ಬಗ್ಗೆ ಈ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರನ್ನು ದಿನಾಂಕ: 2-12-95 ರಂದು ನಿಯೋಜಿಸಿ ತಪಾಸಣೆ ಮಾಡಿಸಿದೆ. ಇದಲ್ಲದೆ ಈ ಸದರಿ ಸಂಘದ ಅವ್ಯವಹಾರದ ಬಗ್ಗೆ ಈಗಾಗಲೇ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು ಬೆಳಗಾವಿ ವಿಭಾಗ, ಬೆಳಗಾವಿ, ಇವರು ಸಹಕಾರ ಸಂಘಗಳ ಕಾಯ್ದೆ 1959 ಕಲಂ 64(1) ಪ್ರಕಾರ ವಿಚಾರಣೆಯನ್ನು ಮಾಡಿ ಕೂಡಲೇ ವರದಿ ಒಪ್ಪಿಸುವಂತೆ ಮಾರಾಟ ಅಧಿಕಾರಿಯನ್ನಾಗಿ ಮಾಡಿ ಆದೇಶ ಹೊರಡಿಸಿರುತ್ತಾರೆ. ಸದರಿ ವಿಚಾರಣಾ ವರದಿ ಬುದ ಮೇಲೆ ಕೂಡಲೇ ಸಂಬಂಧಪಟ್ಟವರ ಮೇಲೆ ಕ್ರಮ ಜರುಗಿಸಲಾಗುವುದು.

ತೋಟಗಾರಿಕೆ ಇಲಾಖೆಗೆ ಬಿಡುಗಡೆಯಾದ ಹಣ

188 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲಾ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೋಟಗಾರಿಕೆ ಇಲಾಖೆಗೆ 1995Ë96ರಲ್ಲಿ ಬಿಡುಗಡೆಯಾದ ಒಟ್ಟು ಹಣವೆಷ್ಟು?

ಆ) ಯಾವ ಯಾವ ಯೋಜನೆಗಳಿಗೆ ಖರ್ಚಾದ ಹಣವೆಷ್ಟು? (ಯೋಜನೆವಾರು)

ಇ) ಎಷ್ಟು ಫಲಾನುಭವಿಗಳಿಗೆ ನೀಡಿದೆ? (ಗ್ರಾಮ ಪಂಚಾಯಿತಿವಾರು ವಿವರ)

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಒಟ್ಟು ರೂ. 5,645.85 ಲಕ್ಷಗಳು.